ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ಒದಗಿಸುವುದು

346(3714); ಶ್ರೀ. ಯಶವಂತರಾಯಗೌಡ ಎಕ್ಕಲಗೌಡ ಪಾಟೀಲ್ (ಇಂಡಿ)

ಅ) ಬಿಜಾಪುರ ಜಿಲ್ಲೆಯ ಇಂಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇರುವ ವಸತಿ ಶಾಲೆಗಳ ಸಂಖ್ಯೆ ಎಷ್ಟು; ಅವು ಯಾವುವು;

ಆ) ಇವುಗಳಲ್ಲಿ ಎಷ್ಟು ವಸತಿ ಶಾಲೆಗಳು ಸ್ವಂತ ಕಟ್ಟಡ ಹೊಂದಿದೆ;

ಇ) ಎಷ್ಟು ವಸತಿ ಶಾಲೆಗಳು ಖಾಸಗಿ ಕಟ್ಟಡಗಳಲ್ಲಿ ನಡೆಯುತ್ತಿವೆ;

ಈ) ಖಾಸಗಿ ಕಟ್ಟಡಗಳಿಂದ ಸ್ವಂತ ಕಟ್ಟಡಗಳಿಗೆ ವಸತಿ ಶಾಲೆಗಳನ್ನು ಯಾವಾಗ ಸ್ಥಳಾಂತರಿಸಲಾಗುವುದು; ಅದಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು (ವಿವರ ಒದಗಿಸುವುದು);

ಉ) ಇಂಡಿ ವಿಧಾನಸಭಾ ಕ್ಷೇತ್ರದ ಯಾವ ಯಾವ ಸ್ಥಳಗಳಲ್ಲಿ ವಸತಿ ಶಾಲೆಗಳನ್ನು ಮಂಜೂರು ಮಾಡಲಾಗುವುದು (ವಿವರ ಒದಗಿಸುವುದು);

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ)

ಅ) ಮೂರು ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ವಿವರ ಈ ಕೆಳಕಂಡಂತಿದೆ.

1. ಮೊರಾರ್ಜಿ ದೇಸಾಯಿ ವಸತಿ ಶಾಲೆ, ಲಚ್ಯಾಣ, ಬಳ್ಳೋಳ್ಳಿ (ಪ.ಜಾತಿ)
2. ಮೊರಾಜಿ ದೇಸಾಯಿ ವಸತಿ ಶಾಲೆ; ಹೊರ್ತಿ (ಹಿಂ.ವರ್ಗ)
3. ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಅಂಜುಟಗಿ, (ಪ.ಜಾತಿ)

Three residential schools are functioning. They are

1. Moraji Desai Residential School, at Lachana, Bailolli (SC)
2. Moraji Desai Residential School, at Horti, (BC)

3. Kitturu Rani Chennamma Residential School, at Anjutagi (SC)

ಆ) 03 ವಸತಿ ಶಾಲೆಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ.

03 schools are functioning in own buildings.

ಇ) ಇಲ್ಲ.

Nil.

ಈ) ಉದ್ಭವಿಸುವುದಿಲ್ಲ.

Does not arise.

ಉ) 2014–15ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಹೋಬಳಿಗೆ ಒಂದು ವಸತಿ ಶಾಲೆ ತೆರೆಯುವುದು ಸರ್ಕಾರದ ನೀತಿಯಾಗಿದ್ದು, ವಿದ್ಯಾರ್ಥಿಗಳ ಬೇಡಿಕೆಯನ್ನು ಆಧರಿಸಿ ಶಾಲೆಗೆ ಅವಶ್ಯವಿರುವ ಜಮೀನು ಲಭ್ಯತೆಯನ್ನು ಅನುಸರಿಸಿ, ಹೊಸ ವಸತಿ ಶಾಲೆಗಳನ್ನು ತೆರೆಯಲಾಗುವುದು.

As per the announcement in budget speech 2014-15 it is a policy of Government open one residential school at hobali level. Based on the demand of the students and availability land funds, new residential schools will be opened.

ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳು

347(4270); ಶ್ರೀ ಶಾಂತನಗೌಡ ಡಿ.ಜಿ (ಹೊನ್ನಾಳಿ)

ಅ) ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಕಿರಿಯ ಮತ್ತು ಹಿರಿಯ ಫಾರ್ಮಸಿಸ್ಟ್ ಹಾಗೂ ಪ್ರಯೋಗ ಶಾಲಾ ತಂತ್ರಜ್ಞರುಗಳ ಮಂಜೂರಾದ ಹುದ್ದೆಗಳೆಷ್ಟು; ಎಷ್ಟು ಹುದ್ದೆಗಳು ಖಾಲಿ ಇವೆ; ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು;